# ಸ್ವಚ್ಛತಾ ಶಪಥ

ಮಹಾತ್ಮಾ ಗಾಂಧಿ ಅವರು ಕೇವಲ ಸ್ವತಂತ್ರ ಮಾತ್ರವಲ್ಲ, ಸ್ವಚ್ಛ ಮತ್ತು ಅಭಿವೃದ್ಧಿಶೀಲ ಭಾರತದ ಕನಸು ಕಂಡಿದ್ದರು.

ಮಹಾತ್ಮಾ ಗಾಂಧಿ  ಭಾರತ ಮಾತೆಗೆ ಸ್ವಾತಂತ್ರ್ಯ ಗಳಿಸಿಕೊಟ್ಟರು.

ದೇಶವನ್ನು ಸ್ವಚ್ಛ ಮತ್ತು ಅಚ್ಚುಕಟ್ಟಾಗಿರಿಸುವ ಮೂಲಕ ಭಾರತ ಮಾತೆಯ ಸೇವೆ ಮಾಡುವುದು ಈಗ ನಮ್ಮ ಕರ್ತವ್ಯ.

ದೇಶವನ್ನು ಶುಚಿಯಾಗಿ ಇಡುವಲ್ಲಿ ನಾನು ಬದ್ಧನಾಗಿದ್ದೇನೆ ಮತ್ತು ಅದಕ್ಕಾಗಿ ಸಮಯ ವಿನಿಯೋಗಿಸುತ್ತೇನೆ ಎಂದು ಶಪಥ ತೆಗೆದುಕೊಳ್ಳುತ್ತೇನೆ.

ನಾನು ವರ್ಷದಲ್ಲಿ ನೂರು ಗಂಟೆಗಳ ಕಾಲ, ಅಂದರೆ ವಾರದಲ್ಲಿ ಎರಡು ಗಂಟೆಗಳನ್ನು ಸ್ವಯಂ ಪ್ರೇರಿತನಾಗಿ ಸ್ವಚ್ಛತಾಕಾರ್ಯಕ್ಕಾಗಿ ವಿನಿಯೋಗಿಸುತ್ತೇನೆ.

ನಾನು ಕಸವನ್ನು ಎಲ್ಲೆಂದರಲ್ಲಿ ಹಾಕುವುದಿಲ್ಲ ಮತ್ತು ಇತರರಿಗೆ ಅದನ್ನು ಹಾಕಲು ಬಿಡುವುದಿಲ್ಲ.

ಪ್ರಂಪಚದ ಯಾವ ದೇಶಗಳ ಪ್ರಜೆಗಳು ಕಸವನ್ನು ಎಲ್ಲೆಂದರಲ್ಲಿ ಹಾಕುವುದಿಲ್ಲವೋ ಮತ್ತು ಇತರರಿಗೆ ಹಾಕುವುದಕ್ಕೆ ಬಿಡುವುದಿಲ್ಲವೋ ಆ ದೇಶಗಳು ಮಾತ್ರ ಸ್ವಚ್ಛ ಹಾಗೂ ನಿರ್ಮಲವಾಗಿವೆ ಎಂದು ನಾನು ನಂಬಿರುವೆ.

ಈ ದೃಢ ನಂಬಿಕೆಯೊಂದಿಗೆ ನಾನು ಸ್ವಚ್ಛ ಭಾರತದ ಸಂದೇಶವನ್ನು ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ಸಾರುತ್ತೇನೆ.

ನಾನು ಇಂದು ತೆಗೆದುಕೊಳ್ಳುತ್ತಿರುವ ಈ ಶಪಥವನ್ನು ಇನ್ನೂ 100 ಮಂದಿ ತೆಗೆದುಕೊಳ್ಳುವಂತೆ ಪ್ರೇರೇಪಿಸುತ್ತೇನೆ.

ಆ ನೂರು ಮಂದಿ ಪ್ರತಿ ವರ್ಷ ತಮ್ಮ ನೂರು ಗಂಟೆಗಳ ಕಾಲವನ್ನು ಈ ಅಭಿಯಾನಕ್ಕಾಗಿ ಮೀಸಲಿಡುವಂತೆ ನಾನು ಪ್ರಯತ್ನಿಸುತ್ತೇನೆ.

ಸ್ವಚ್ಚತೆಗಾಗಿ ನಾವು ತೆಗೆದುಕೊಳ್ಳುವ ಪ್ರತಿಯೊಂದು ಕ್ರಮವೂ ನಮ್ಮ ದೇಶವನ್ನು ನಿರ್ಮಲವಾಗಿಸುತ್ತದೆ ಎಂಬ ವಿಶ್ವಾಸ ನನಗಿದೆ.

★★★★★★★★